

# ಲತಾ ದೀದಿಯ ಸಿಟ್ಟು

ಹಿಂದಿ ಚಿತ್ರರಂಗದಲ್ಲಿ ಹಳೆಯ ಯಶಸ್ವೀ ಮತ್ತು ಜನಪ್ರಿಯ ಹಾಡುಗಳನ್ನು ರಿಮಿಕ್ಸ್ ಮಾಡಿ ಹೊಸ ಚಿತ್ರಗಳಲ್ಲಿ ಬಳಸುವುದು ಹಳೆಯ ಟ್ರೆಂಡ್. ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ರಿಮಿಕ್ಸ್‌ಗಳ ಸಂಖ್ಯೆ ಏರುತ್ತಿದೆ. ಆರಂಭದಲ್ಲಿ ಇದೊಂದು ರೀತಿಯ ಹೊಸ ಪ್ರಯೋಗ ಎನ್ನಿಸಿದರೂ ಇತ್ತೀಚೆಗೆ ಈ ರಿಮಿಕ್ಸ್ ಪದ್ಧತಿಯ ವಿರುದ್ಧ ಅತೃಪ್ತಿ, ಅಸಮಾಧಾನಗಳು ಭುಗಿಲೇಳುತ್ತಿವೆ. ಕಳೆದ ವಾರ ಹಿಂದಿ ಚಿತ್ರರಂಗದ ದಂತಕಥೆಯೆಂದೇ ಖ್ಯಾತಿ ಹೊಂದಿರುವ ಲತಾ ಮಂಗೇಶ್ಕರ್ ಕೂಡಾ ಈ ರಿಮಿಕ್ಸ್ ಹಾಡುಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪಾಕೀಜಾ' 1972ರಲ್ಲಿ ತೆರೆಗೆ ಬಂದು ಅತ್ಯಧಿಕ ಯಶಸ್ಸು ಕಂಡ ಸಿನಿಮಾ. ಅದು ಮೀನಾಕುಮಾರಿಯ ಕಾಲ. ಅಶೋಕ್ ಕುಮಾರ್ ಮತ್ತು ರಾಜ್‌ಕುಮಾರ್ ಜತೆಗೆ ಮೀನಾಕುಮಾರಿ ನಟಿಸಿದ ಈ ಚಿತ್ರದ ಅತ್ಯಂತ ಜನಪ್ರಿಯ ಹಾಡು 'ಚಲ್ತೇ ಚಲ್ತೇ ಯೋ ಹೀಂ ಕೊಯಿ ಮಿಲ್ ಗಯಾ...' ಮೀನಾಕುಮಾರಿಯ ಮುಜ್ರಾ ನೃತ್ಯ ಸನ್ನಿವೇಶದ ಈ ಹಾಡನ್ನು ಹಾಡಿದವರು ಲತಾ ಮಂಗೇಶ್ಕರ್. ಅವತ್ತಿನ್ನೂ ಅಷ್ಟಾಗಿ ಮಾಗಿಲ್ಲದ ತಾರುಣ್ಯದ ಧ್ವನಿಯಲ್ಲಿ ಲತಾ ಈ ಹಾಡನ್ನು ಹಾಡಿದ್ದು, ಲಕ್ಷಾಂತರ ರಸಿಕರ ಮನಸೂರೆಗೊಂಡಿತ್ತು. ಅವತ್ತು ಆ ಹಾಡಿಗೆ ಸಂಗೀತ ನೀಡಿದವರು ಶ್ರೇಷ್ಠ ಕಂಪೋಸರ್ ಅನ್ನಿಸಿಕೊಂಡಿದ್ದ ಗುಲಾಂ ಮೊಹಮ್ಮದ್. ಈ ಹಾಡು ಇವತ್ತಿಗೂ ಸಂಗೀತಪ್ರಿಯರ 'ಟಾಪ್ ಟೆನ್' ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದೆ.

ಇದೇ ಹಾಡನ್ನು ಇತ್ತೀಚೆಗೆ 'ಮಿತ್ರೋಂ' ಎನ್ನುವ ಹಿಂದಿ ಸಿನಿಮಾಕ್ಕೆ ಪಾಕಿಸ್ತಾನ ಸಂಜಾತ, ಬಾಲಿವುಡ್‌ನ ಇತ್ತೀಚಿನ ಜನಪ್ರಿಯ ಗಾಯಕ ಅತೀಫ್ ಅಸ್ಲಾಂ ಹಾಡಿದ್ದಾರೆ. ಲತಾ ಹಾಡಿಗೂ, ಅತಿಫ್ ಹಾಡಿರುವ ಹಾಡಿಗೂ ಅಜಗಜಾಂತರ ವ್ಯತ್ಯಾಸವಿದೆ. ಅತಿಫ್ ಯಾವುದೋ ಶೋಕಗೀತೆಯನ್ನು ಹಾಡಿದಂತೆ ಕೇಳಿಸುತ್ತದೆ. ಈ ಸುದ್ದಿ ಕೇಳಿ ಸ್ವತಃ ಲತಾ ದೀದಿ ಸಿಟ್ಟಿಗೆದ್ದಿದ್ದಾರೆ. 'ಈ ರಿಮಿಕ್ಸ್ ಹಾಡನ್ನು ಕೇಳಲು ನಾನು ಇಷ್ಟಪಡುವುದಿಲ್ಲ. ಸುಮ್ಮನೆ ಹಳೆಯ ಹಾಡನ್ನು ಹೀಗೆ ಅನಾಮತ್ತಾಗಿ ಎತ್ತಿಕೊಂಡು ಹಾಡಿದರೆ ಅಲ್ಲಿ ಸೃಜನಶೀಲತೆಗೆ ಅವಕಾಶ ಎಲ್ಲಿದೆ? ಅದರಲ್ಲೂ ಸಾರ್ವಕಾಲಿಕ ಕ್ಲಾಸಿಕ್‌ಗಳಾಗಿ ಪರಿಗಣಿಸಲ್ಪಟ್ಟಿರುವ ಹಾಡುಗಳನ್ನು ಕೆಟ್ಟದಾಗಿ ಹಾಡುವುದಲ್ಲದೆ ಸಾಹಿತ್ಯವನ್ನೂ, ಸಂಗೀತದ ನೋಟ್ಸ್‌ಗಳನ್ನೂ ಬದಲಾಯಿಸುವುದು ಎಳ್ಳಷ್ಟೂ ಸರಿಯಲ್ಲ. ಯಾರ ಅನುಮತಿ ಪಡೆದುಕೊಂಡು ಹೀಗೆ ಮಾಡಿದ್ದಾರೆ? ಮೂಲ ಸಾಹಿತಿ ಮತ್ತು ಕಂಪೋಸರ್ ಅವರ ರಚನೆಯನ್ನು ಬದಲಾಯಿಸಲು ಯಾರಿಗೂ ಹಕ್ಕಿಲ್ಲ' ಎಂದು ಲತಾ ದೀದಿ ಸಿಟ್ಟಿನಿಂದ ಹೇಳಿದ್ದಾರೆ.

ಇತ್ತೀಚೆಗೆ ಗಾಯಕಿ ಅಲಕಾ ಯಾಜ್ಞಿಕ್ ಕೂಡಾ ಇಂತಹದ್ದೇ ಇನ್ನೊಂದು ರಿಮಿಕ್ಸ್ ಹಾಡಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಆಕೆ ಹಾಡಿರುವ ಅತ್ಯಂತ ಜನಪ್ರಿಯ ಹಾಡು 'ದಿಲ್‌ಬರ್ ದಿಲ್‌ಬರ್' ಇತ್ತೀಚಿನ 'ಸತ್ಯಮೇವ ಜಯತೆ' ಚಿತ್ರದಲ್ಲಿ ರಿಮಿಕ್ಸ್ ರೂಪದಲ್ಲಿ ಕಾಣಿಸಿಕೊಂಡಿತ್ತು. 'ಇವರೇಕೆ ಹೊಸ ಹಾಡುಗಳನ್ನು ಬರೆದು ತಮ್ಮ ಸಿನಿಮಾಗಳಲ್ಲಿ ಹಾಕಿಕೊಳ್ಳಬಾರದು? ಈಗಾಗಲೆ ಸೂಪರ್‌ಹಿಟ್ ಆಗಿರುವ ಹಾಡುಗಳನ್ನು ರಿಮಿಕ್ಸ್ ಮಾಡುವುದಲ್ಲದೆ, ಹೊಸ ರಿಮಿಕ್ಸ್ ಹಾಡೇ ಹೆಚ್ಚು ಜನಪ್ರಿಯವಾಗಿದೆ ಎಂದು ಸುಳ್ಳು ಬೇರೆ ಹೇಳುತ್ತಾರೆ. ಒರಿಜಿನಲ್ ಹಾಡುಗಳನ್ನು ಕೆಡಿಸಲು ಇವರಿಗೆ ಅಧಿಕಾರ ಕೊಟ್ಟವರು ಯಾರು?' ಎಂದು ಅಲಕಾ ಕಿಡಿ ಕಾರಿದ್ದಾರೆ. ಲತಾ ದೀದಿಯ ಈ ಅತೃಪ್ತಿಗೆ ಬಾಲಿವುಡ್‌ನ ಹಲವು ಖ್ಯಾತನಾಮರೂ ದನಿಗೂಡಿಸಿದ್ದಾರೆ.

ಹಳೆಯ ಜನಪ್ರಿಯ ಹಾಡುಗಳಿಗೆ ಅವುಗಳದ್ದೇ ಆದ ಖ್ಯಾತಿ ಮತ್ತು ಸ್ಥಾನಮಾನವಿದೆ ಎನ್ನುವುದು ಸುಳ್ಳಲ್ಲ. ಅದರಲ್ಲೂ ಲತಾ ದೀದಿ ಹಾಡಿರುವ 'ಚಲ್ತೇ ಚಲ್ತೇ..' ಎವರ್‌ಗ್ರೀನ್ ಹಾಡು. ಅದನ್ನು ಇನ್ನೊಬ್ಬ ಪುರುಷ ಗಾಯಕನ ಕಂಠದಲ್ಲಿ ಕೇಳುವುದು ಕರ್ಕಶ ಎನ್ನಿಸುವುದು ಸುಳ್ಳಲ್ಲ. ಇನ್ನಾದರೂ ಈ ರಿಮಿಕ್ಸ್ ಹೆಸರಿನ ಕೃತಿಚೌರ್ಯ ನಿಲ್ಲಬಹುದೆ?



## ಜಾಕ್ವೆಲಿನ್ ಆ್ಯಕ್ಷನ್

ಶ್ರೀಲಂಕಾ ಸಂಜಾತೆ, ಬಾಲಿವುಡ್‌ನ ಜನಪ್ರಿಯ ನಟಿ ಜಾಕ್ವೆಲಿನ್ ಫೆರ್ನಾಂಡಿಸ್ ಇದೀಗ ಹಾಲಿವುಡ್‌ಗೆ ಪಯಣ ಬೆಳೆಸಿದ್ದಾಳೆ. 33ರ ಹರೆಯದ ಈ ನೀಳಕಾಲುಗಳ ಸುಂದರಿ ಹಾಲಿವುಡ್‌ನ 'ಡೆಫಿನಿಷನ್ ಆಫ್ ಫಿಯರ್' ಚಿತ್ರದಲ್ಲಿ ನಟಿಸುತ್ತಿದ್ದಾಳೆ. ಈ ಸಿನಿಮಾದಲ್ಲಿ ಎರಡು ಭರ್ಜರಿ ಆ್ಯಕ್ಷನ್ ದೃಶ್ಯಗಳಿವೆಯಂತೆ. ಕತ್ತಿವರಸೆ ಮತ್ತು ಕುಂಗ್‌ಫೂ ಮಿಶ್ರಣದ ಈ ದೃಶ್ಯದಲ್ಲಿ ಜಾಕ್ವೆಲಿನ್ ಖುದ್ದಾಗಿ ನಟಿಸಿರುವುದು ವಿಶೇಷ. ಈ ದೃಶ್ಯಗಳಿಗೆ ಡ್ಯೂಪ್ ಬಳಸೋಣ ಎಂದರೂ ಜಾಕ್ವೆಲಿನ್ ಒಪ್ಪಿಲ್ಲವಂತೆ. ಖುದ್ದಾಗಿ ಫೆನ್ಸಿಂಗ್ ಕಲಿತು ತಾನೇ ಭಾಗವಹಿಸಿ ಭೇಷ್ ಎನ್ನಿಸಿಕೊಂಡಿದ್ದಾಳೆ. ಈ ಹಿಂದೆ ಸಲ್ಮಾನ್ ಖಾನ್ ಅಭಿನಯದ 'ಕಿಕ್' ಚಿತ್ರದಲ್ಲಿ ಅತ್ಯಂತ ಕಷ್ಟಕರ ಸ್ಟೆಪ್‌ಗಳಿದ್ದ ನೃತ್ಯವೊಂದರಲ್ಲಿ ತಾನೇ ಕುಣಿದು ಶಹಬ್ಬಾಸ್‌ಗಿರಿ ಪಡೆದಿದ್ದ ಜಾಕ್ವೆಲಿನ್ ಈಗ ಹಾಲಿವುಡ್‌ನಲ್ಲೂ ಸುದ್ದಿ ಮಾಡುತ್ತಿದ್ದಾಳೆ.

■ ಬಿಂದು